# ಜನಪದ ಪರಂಪರೆ ಮತ್ತು ಆಧುನಿಕ ಪ್ರಭಾವಗಳು

ಹೆಚ್.ಎಂ. ಮಲ್ಲಿಕಾರ್ಜುನ

ಕನ್ನಡ ಸಹಾಯಕ ಪ್ರಾಧ್ಯಾಪಕರು, ಕ್ರೈಸ್ಟ್ ಅಕಾಡೆಮಿ ಇನ್ಸ್ಟಿಟ್ಯೂಟ್ ಫಾರ್ ಅಡ್ವಾನ್ಸ್ಡ್ ಸ್ಟಡೀಸ್, ಬೆಂಗಳೂರು.

DOI: https://doi.org/10.5281/zenodo.18776098

**ABSTRACT:**

ಜನಪದ ಪರಂಪರೆ ಎನ್ನುವುದು ಒಂದು ಸಮಾಜದ ಸಾಂಸ್ಕೃತಿಕ ಗುರುತು. ಪೀಳಿಗೆಯಿಂದ ಪೀಳಿಗೆಗೆ ಮೌಖಿಕವಾಗಿ ಸಾಗಿಬಂದ ಆಚರಣೆಗಳು, ನಂಬಿಕೆಗಳು, ಕಲೆ, ಸಾಹಿತ್ಯ, ಸಂಗೀತ ಮತ್ತು ಜೀವನಶೈಲಿಯೇ ಜನಪದ ಪರಂಪರೆಯ ಮೂಲ. ಇದು ಜನಸಾಮಾನ್ಯರ ಬದುಕಿನ ಅನುಭವಗಳಿಂದ ಹುಟ್ಟಿ, ಸಮುದಾಯದ ಒಕ್ಕೂಟವನ್ನು ಪ್ರತಿಬಿಂಬಿಸುತ್ತದೆ. ಜನಪದ ಗೀತೆಗಳು, ಕಥೆಗಳು, ನೃತ್ಯಗಳು, ಹಬ್ಬಗಳು ಹಾಗೂ ಸಂಸ್ಕಾರಗಳು ಜನರ ದಿನನಿತ್ಯದ ಬದುಕಿನೊಂದಿಗೆ ನಿಕಟವಾಗಿ ಸಂಬಂಧವನ್ನು ಹೊಂದಿವೆ.

ಆಧುನಿಕ ಯುಗದಲ್ಲಿ ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ, ನಗರೀಕರಣ ಮತ್ತು ಜಾಗತೀಕರಣವು ಸಮಾಜದಲ್ಲಿ ಮಹತ್ತರವಾದ ಬದಲಾವಣೆಗಳನ್ನು ತಂದಿವೆ. ಈ ಆಧುನಿಕ ಪ್ರಭಾವಗಳು ಜನಪದ ಪರಂಪರೆಯ ಮೇಲೂ ಪರಿಣಾಮ ಬೀರಿವೆ. ಒಂದು ಕಡೆ ಮಾಧ್ಯಮಗಳು ಮತ್ತು ಡಿಜಿಟಲ್ ತಂತ್ರಜ್ಞಾನಗಳ ಮೂಲಕ ಜನಪದ ಕಲೆಗಳಿಗೆ ಹೊಸ ವೇದಿಕೆಗಳು ದೊರೆತಿವೆ. ಜನಪದ ಸಾಹಿತ್ಯ, ಸಂಗೀತ ಮತ್ತು ನೃತ್ಯಗಳು ದಾಖಲೀಕರಣಗೊಂಡು ಅವುಗಳನ್ನು ಸಂರಕ್ಷಿಸುವ ಅವಕಾಶಗಳು ಹೆಚ್ಚಿವೆ. ಹೊಸ ಪ್ರಯೋಗಗಳ ಮೂಲಕ ಯುವಜನರಲ್ಲಿ ಜನಪದ ಪರಂಪರೆಯತ್ತ ಆಸಕ್ತಿ ಮೂಡುತ್ತಿದೆ. ಆದರೆ ಇನ್ನೊಂದು ಕಡೆ, ನಗರ ಜೀವನಶೈಲಿ ಮತ್ತು ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ಅನೇಕ ಜನಪದ ಆಚರಣೆಗಳು ನಿಧಾನವಾಗಿ ಕಣ್ಮರೆಯಾಗುತ್ತಿವೆ. ವಾಣಿಜ್ಯೀಕರಣದಿಂದ ಜನಪದ ಕಲೆಗಳ ಮೂಲ ಆತ್ಮ ಮತ್ತು ಮೌಲ್ಯಗಳಿಗೆ ಧಕ್ಕೆ ಉಂಟಾಗಿದೆ. ಸಮುದಾಯದ ಐಕ್ಯತೆಯ ಬದಲಿಗೆ ವೈಯಕ್ತಿಕತೆಯು ಹೆಚ್ಚಾಗುತ್ತಿರುವುದು ಜನಪದ ಸಂಸ್ಕೃತಿಗೆ ಸವಾಲಾಗಿದೆ.

ಆದುದರಿಂದ ಜನಪದ ಪರಂಪರೆಯನ್ನು ತಿರಸ್ಕರಿಸದೇ, ಆಧುನಿಕತೆಯೊಂದಿಗೆ ಸಮತೋಲನ ಸಾಧಿಸುವುದು ಅಗತ್ಯ. ಶಿಕ್ಷಣ ಕ್ಷೇತ್ರದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸ್ಥಳೀಯ ಕಲಾವಿದರಿಗೆ ಬೆಂಬಲ ನೀಡುವುದರ ಮೂಲಕ ಜನಪದ ಪರಂಪರೆಯನ್ನು ಜೀವಂತವಾಗಿ ಉಳಿಸಬಹುದು. ಜನಪದ ಸಂಸ್ಕೃತಿಯ ಸಂರಕ್ಷಣೆಯು ನಮ್ಮ ಸಾಂಸ್ಕೃತಿಕ ಅಸ್ತಿತ್ವದ ರಕ್ಷಣೆಯಾಗಲಿದೆ.

ಆಧುನಿಕ ಪ್ರಭಾವಗಳು ಹೇಗೆ ಜನಪದ ಸಂಸ್ಕೃತಿಯನ್ನು ಹಿನ್ನೆಲೆಗೆ ಸರಿಯುವಂತೆ ಮಾಡಿವೆ ಎಂಬುದನ್ನು ಕುರಿತು ಗಂಭೀರವಾಗಿ ಇಂದು ಪರಿಗಣಿಸಬೇಕಾದ ಅಗತ್ಯತೆ ಇದೆ. ಪರಂಪರೆಯಿಂದ ನಡೆದುಕೊಂಡು ಬಂದ ಅನೇಕ ಆಚರಣೆಗಳನ್ನು ಅನುಸರಿಸುವುದು ಅವಮಾನದ ಸಂಗತಿ ಎಂಬಂತೆ ಈ ಪೀಳಿಗೆಯವರು ಭಾವಿಸಿರುವುದು ಜನಪದ ಪರಂಪರೆಯ ಅಳಿವಿಗೆ ಕಾರಣವಾಗಿದೆ. ಇಂತಹ ಸೂಕ್ಷ್ಮ ಅಂಶಗಳನ್ನು ಈ ಸಂಶೋಧನಾ ಲೇಖನದಲ್ಲಿ ಚರ್ಚಿಸಲಾಗುವುದು. ಅದರ ಜೊತೆಗೆ ಅದರ ಉಳಿವಿಗೆ ಅನುಸರಿಸಬೇಕಾದ ಕ್ರಮಗಳನ್ನು

ವಿವೇಚಿಸಲಾಗುತ್ತದೆ.

**KEYWORDS:**

ಜನಪದ ಪರಂಪರೆ, ಸಂಸ್ಕೃತಿ, ಮೌಖಿಕ ಸಾಹಿತ್ಯ, ಜನಪದ ಕಲೆ, ಆಚರಣೆಗಳು, ಸಮುದಾಯ.

**ಜನಪದ ಪರಂಪರೆ ಮತ್ತು ಆಧುನಿಕ ಪ್ರಭಾವಗಳು**

ಜನಪದ ಪರಂಪರೆಯ ಉಗಮ ಎಂದು ಆಯಿತೆಂಬುದು ಖಚಿತವಾಗಿ ಇಂದಿಗೂ ನಿರ್ಣಯಿಸಲಾಗದ ಸಂಗತಿಯಾಗಿದೆ. ಅದು ಮನುಷ್ಯನಷ್ಟೇ ಪ್ರಾಚೀನವಾದುದು. ಇಂದಿನ ಲಿಪಿ ಆಧಾರಿತ ಸಾಹಿತ್ಯಕ್ಕೆ ಜಾನಪದ ಪರಂಪರೆಯೇ ಮೂಲವೆಂಬುದನ್ನು 'ಜನವಾಣಿ ಬೇರು ಕವಿವಾಣಿ ಹೂ' ಎಂಬ ಮಾತು ಸಾಬೀತು ಮಾಡುತ್ತದೆ. ಪ್ರಪಂಚದ ಎಲ್ಲಾ ಸಾಹಿತ್ಯ ಪರಂಪರೆಗೂ ಮೌಖಿಕ ಸಾಹಿತ್ಯವೇ ಮೂಲ ಎಂಬುದು ಒಪ್ಪಬೇಕಾದ ಸತ್ಯ. ಭಾರತೀಯ ಪರಂಪರೆಯಲ್ಲಿ ಕರ್ನಾಟಕ ಜಾನಪದ ಪರಂಪರೆ ವಿಶಿಷ್ಟವಾದುದು ಮತ್ತು ಶ್ರೀಮಂತವಾದುದು ಆಗಿದೆ. ಪ್ರದೇಶದ ವಿಸ್ತಾರದ ಜೊತೆಗೆ ಸಂಸ್ಕೃತಿಯ ಭಿನ್ನತೆಯೂ ಹೆಚ್ಚು ಇರುವುದನ್ನು ಗುರುತಿಸಬಹುದು. ವಿವಿಧ ಜಾತಿ, ಭಿನ್ನ ಶೈಲಿಯ ಭಾಷೆ, ಸಂಸ್ಕೃತಿಯನ್ನು ಅನುಸರಿಸುವ ಜನರು ಈ ನಾಡಿನಲ್ಲಿದ್ದಾರೆ.

ಪ್ರಮುಖವಾಗಿ ಈ ಪರಂಪರೆಯಲ್ಲಿ ನಾಟಕ, ಗಾದೆ, ಕಥೆ, ಸೋಬಾನೆ ಪದಗಳು, ಸುಗ್ಗಿ ಪದಗಳು, ಭತ್ತ ಕುಟ್ಟುವ ಹಾಡು, ನಾಟಿ ಹಾಕುವಾಗ ಹಾಡುವ ಹಾಡು, ವಿವಿಧ ಆಚರಣೆ, ದೇವರ ಪೂಜೆ, ಆಚಾರ-ವಿಚಾರ, ಲಾವಣಿ, ಮಹಾಕಾವ್ಯ, ದೇಸಿ ಆಟಗಳು, ಬಯಲಾಟ, ವೀರಗಾಸೆ, ಕರಡಿ ಕುಣಿತ, ಸೋಮನ ಕುಣಿತ, ತೊಗಲು ಬೊಂಬೆಯಾಟ, ಪೂಜಾ ಕುಣಿತ, ಪಟದ ಕುಣಿತ, ದೊಡ್ಡಾಟ, ಸಣ್ಣಾಟ, ಉಮ್ಮತ್ತಾಟ, ತಮಟೆ ಬಡಿಯುವಿಕೆ, ಯಕ್ಷಗಾನ, ಕಂಸಾಳೆ ಹೀಗೆ ಪ್ರದೇಶಾನುಗುಣವಾದ ಜನಪದ ಕಲೆಗಳು ಇನ್ನೂ ಅನೇಕ ಇದ್ದು, ಇಂದಿಗೂ ಜೀವಂತವಾಗಿವೆ.

**ಜಾನಪದ ಪದದ ನಿಷ್ಪತ್ತಿ:**

ಜಾನಪದ ಎಂಬ ಪದವು ಇಂಗ್ಲಿಷಿನ 'Folklore' ಎಂಬುದಕ್ಕೆ ಸಮಾನಾರ್ಥಕವಾಗಿರುವ ಕನ್ನಡ ಪದ. Folklore ಎಂಬುದು Folk & Lore ಎಂಬ ಎರಡು ಪ್ರತ್ಯೇಕ ಪದಗಳ ಸಂಯೋಗವಾಗಿದೆ. Folk ಎಂದರೆ ಜನಪದ, Lore ಎಂದರೆ ಜ್ಞಾನ ಎಂಬರ್ಥವಿದೆ. 'ಜಾನಪದ ಜ್ಞಾನ' ಈ ವಿಷಯಕ್ಕೆ ಡಾ. ಹಾ.ಮಾ. ನಾಯಕ ಅವರು 'ಜಾನಪದ' ಎಂಬ ಶಬ್ದವನ್ನು ಬಳಸಿದ್ದಾರೆ. ಜನಪದ ಜ್ಞಾನವನ್ನೇ ಜಾನಪದ ಎಂದು ಕರೆಯಬಹುದು. ಜನಪದರ ಸಾಹಿತ್ಯ, ಸಂಗೀತ, ನೃತ್ಯ, ಸಂಸ್ಕೃತಿ, ದೇಸಿ ಆಟ ಈ ಎಲ್ಲವನ್ನು ಒಳಗೊಂಡಿರುವಿಕೆಯನ್ನು ಜಾನಪದವೆಂದು

ಕರೆಯಬಹುದು.

**ಜಾನಪದ ಪರಂಪರೆ ಮತ್ತು ಬದುಕಿನ ಮೌಲ್ಯ:**

ಜಾನಪದ ಪರಂಪರೆಯನ್ನು ಅನುಸರಿಸಿದ ನಮ್ಮ ಪೂರ್ವಜರು ಅದರಲ್ಲಿ ಬದುಕಿನ ಮೌಲ್ಯಗಳನ್ನು ಗುರುತಿಸಿದ್ದರು. ಅದನ್ನು ಮುಂದಿನ ಪೀಳಿಗೆಯವರು ಜತನ ಮಾಡಿಕೊಳ್ಳಬೇಕೆಂದು ಬಹುವಾಗಿ ಬಯಸಿದ್ದರು. ಅದು ಮೌಖಿಕ ಸಾಹಿತ್ಯ, ಕಲೆ, ಸಂಸ್ಕೃತಿ, ಆಚರಣೆ ಯಾವುದೇ ಆಗಲಿ ಅದರಲ್ಲಿ ಮೌಲ್ಯವಿರುವುದನ್ನು ಅರಿತೇ ಅದನ್ನು ಅನುಸರಿಸಿದ್ದರು. ಕೆಲವೊಮ್ಮೆ ಅದರಲ್ಲಿ ಅಪಮೌಲ್ಯಗಳಿದ್ದರೆ ಅದನ್ನು ನಿಷ್ಕರ್ಷ ಮಾಡಿ ತೀರ್ಮಾನಿಸುವ ಬೌದ್ಧಿಕ ಶ್ರೀಮಂತಿಕೆ ಆ ಕಾಲದ ಜನರಿಗಿದ್ದಿತು. ಇಂತಹ ಕೆಲವು ಆಚರಣೆಗಳನ್ನು ಇಲ್ಲಿ ಸಮೀಕ್ಷಿಸಿ ಅದು ತದನಂತರದಲ್ಲಿ, ಅಸ್ತಿತ್ವದ ನಿಟ್ಟಿನಲ್ಲಿ ಯಾವ ಸ್ತರದಲ್ಲಿದೆ ಎಂಬುದನ್ನು ಈ ಮೂಲಕ ಅರಿಯಬಹುದು.

**ಮೌಖಿಕ ಸಾಹಿತ್ಯ ಪರಂಪರೆ:**

ಇಂದಿನ ಶಿಷ್ಟ ಸಾಹಿತ್ಯ ಪ್ರಾರಂಭವಾಗುವ ಮೊದಲು ಮೌಖಿಕ ಪರಂಪರೆ ಇದ್ದಿತು. ಇಂದಿನ ಎಲ್ಲಾ ಸಾಹಿತ್ಯ ಕೃತಿಗಳಿಗೂ ಇದೇ ಮೂಲಾಧಾರ ಎಂಬುದನ್ನು ಮರೆಯುವಂತಿಲ್ಲ. ಜನಪದರಿಂದ ಪ್ರಾರಂಭವಾದ ಪರಂಪರೆಗಾಗಲೀ, ಸಾಹಿತ್ಯಕ್ಕಾಗಲಿ, ಸಮಾಜದ ಇಂದಿನ ವ್ಯವಸ್ಥೆ ಅಷ್ಟೊಂದು ಮಹತ್ವ ಕೊಟ್ಟಂತೆ ತೋರುವುದಿಲ್ಲ. ಕವಿರಾಜಮಾರ್ಗಕಾರ ಶ್ರೀವಿಜಯ ತನ್ನ ಲಕ್ಷಣ ಗ್ರಂಥದಲ್ಲಿ ಜನಪದರನ್ನು ಕುರಿತಂತೆ ಗೌರವಯುತವಾದ ಮಾತುಗಳನ್ನು ಆಡಿದ್ದಾನೆ.

**ಪದನರಿದು ನುಡಿಯಲುಂ ನುಡಿ**
**ದುದನರಿದಾರಯಲುಮಾರ್ಪರಾ**
**ನಾಡವರ್ಗಳ್ ಚದುರರ್**
**ನಿಜದಿಂ ಕುರಿತೋದದೆಯಂ ಕಾವ್ಯಪ್ರಯೋಗ ಪರಿಣಿತಮತಿಗಳ್**[1]

ಈ ನಾಡಿನ ಜನಪದರು ಯಾವುದೇ ಶಾಸ್ತ್ರ, ಕಾವ್ಯಗಳನ್ನು ಕುರಿತ ಗ್ರಂಥಗಳನ್ನು ಕುರಿತು ಓದದೆಯೂ ಕೂಡಾ, ಕಾವ್ಯಗಳನ್ನು ಪ್ರಯೋಗಿಸುವ ಪರಿಣತಮತಿಗಳಾಗಿದ್ದಾರೆ ಎಂದು ಉಲ್ಲೇಖಿಸಿದ್ದಾನೆ. ಈ ಮಾತುಗಳು ಅಂದಿನ ಕಾಲದ ಜಾನಪದ ಕಲಾವಿದರು, ಕವಿಗಳು ಎಷ್ಟು ಪ್ರಬುದ್ಧರಾಗಿದ್ದರು ಎಂಬುದು ಮನದಟ್ಟಾಗುತ್ತದೆ.

ಜನಪದ ತ್ರಿಪದಿಗಳು ಕನ್ನಡದ ಅಮೂಲ್ಯ ನಿಧಿಗಳೆಂದೇ ಪ್ರಖ್ಯಾತವಾಗಿವೆ. ಬದುಕಿನ ಅನೇಕ ಸ್ತರಗಳನ್ನು ಮೂರು ಸಾಲಿನ ಪದ್ಯದಲ್ಲಿ ಚರ್ಚಿಸಿರುವ ಹಿರಿಮೆ ಈ ಸಾಹಿತ್ಯ ಪರಂಪರೆಗೆ ಸಲ್ಲಬೇಕು. ತವರು ಮನೆಯ ಬಾಂಧವ್ಯವನ್ನು ಹೆಣ್ಣು ಮಗಳು ಯಾವ ರೀತಿ ಇರಿಸಿಕೊಂಡಿದ್ದಳು ಎಂಬುದಕ್ಕೆ ಈ ತ್ರಿಪದಿ ಸಾಕ್ಷಿಯಾಗಿದೆ.

**ಹಾಲುಂಡ ತವರೀಗಿ ಏನೆಂದು ಹರಸಲಿ**
**ಹೊಳೆದಂಡಿಲಿರುವ ಕರಕೀಯ ಕುಡಿಹಾಂಗ**
**ಹಬ್ಬಲಿ ಅವರ ರಸಬಳ್ಳಿ**[2]

**ಜನಪದ ಪರಂಪರೆಯ ಕಲೆಗಳು:**

ಪ್ರಕೃತಿಯ ಮಡಿಲಿನಲ್ಲಿ ಜನಿಸಿದ ಮನುಷ್ಯ ತನ್ನ ಸುತ್ತಲ ಪ್ರಾಣಿಗಳೊಂದಿಗೆ ಸಹಜೀವನ ಪ್ರಾರಂಭಿಸಿದನು. ಅದಲ್ಲದೆ, ಕೃಷಿ ಕಾಯಕ ಮಾಡಿಕೊಂಡಿದ್ದವನಿಗೆ ನಡುವೆ ಆಯಾಸವಾದಾಗ, ಕಲೆ, ಹಾಡು, ನೃತ್ಯ ಮುಂತಾದ ಸೃಜನಶೀಲ ಕಲೆಯಲ್ಲಿ ತೊಡಗಿಸಿಕೊಂಡನು. ಅದೇ ತದನಂತರದಲ್ಲಿ ಜನಪದ ಕಲೆ ಎಂದು ಪ್ರತಿಪಾದಿತವಾಯಿತು. ಇದಲ್ಲದೇ ತನ್ನ ಬದುಕಿನ ಅವಶ್ಯಕತೆಗೆ ಬೇಕಾದ ವಸ್ತುಗಳನ್ನು ತಯಾರಿಸಿಕೊಳ್ಳುವ ಕೌಶಲ್ಯ ಈತನಲ್ಲಿ ಬೆಳೆಯಿತು. ಅದಕ್ಕೆ ನೀಡಿದ ವಿಶೇಷ ವಿನ್ಯಾಸದಿಂದ ಅದು ಕರಕುಶಲತೆಯಾಯಿತು. ಅಂತೆಯೇ ಸಂಗೀತ, ನೃತ್ಯದ ನಿಟ್ಟಿನಲ್ಲಿಯೂ ನಿರಂತರವಾದ ಅಭ್ಯಾಸದಿಂದ ವಿವಿಧ ಪ್ರದೇಶಕ್ಕೆ ಅನುಗುಣವಾಗಿ ಬೆಳೆದು ಬಂದ ಕಲೆಗಳು ಜನಪದ ಕಲೆಗಳೆಂದು ಹೆಸರುವಾಸಿಯಾದವು.

ಕನ್ನಡ ನಾಡು ಸಮೃದ್ಧವಾದ ಸಾಹಿತ್ಯಕ ಇತಿಹಾಸದೊಂದಿಗೆ, ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನೊಳಗೊಂಡಿದೆ. ಅದು ಶಿಷ್ಟತೆಯ ಸೋಂಕಿಲ್ಲದೇ, ಮೌಖಿಕ ಜಗತ್ತಿನೊಳಗೆ ಬೆಳೆದರೂ ಹುಲುಸಾದ ಸಾಂಪ್ರದಾಯಿಕ ಭಾವನೆಗಳನ್ನು ಒಳಗೊಂಡು ಮನೆಮಾತಾಗಿದೆ. "ಒಂದು ವೃತ್ತಿ ಪರಂಪರೆ, ಇನ್ನೊಂದು ಜನಾಂಗ ಪರಂಪರೆ. ವೃತ್ತಿ ಪರಂಪರೆಯಲ್ಲಿ ತಂದೆ ಮಗನಿಗೆ ಕಲಿಸುವ ಪದ್ಧತಿಯನ್ನು ಕಾಣಬಹುದು. ಅದೇ ಜನಾಂಗ ಪರಂಪರೆಯಲ್ಲಿ ಹಿರಿಯರನ್ನು ನೋಡಿ ಕಿರಿಯರು ಕಲಿಯುವ ರೀತಿಯನ್ನು ಕಾಣಬಹುದು".[3] ಅಂತಹ ಹಲವಾರು ಪರಂಪರೆಗಳನ್ನು ಈ ಮುಂದೆ ಸಂಕ್ಷಿಪ್ತವಾಗಿ ವಿವೇಚಿಸಲಾಗಿದೆ.

**ಡೊಳ್ಳು ಕುಣಿತ:**

ಡೊಳ್ಳು ಕುಣಿತ ಜನಪ್ರಿಯ ಜಾನಪದ ಕಲೆಗಳಲ್ಲಿ ಒಂದೆಂದು ಪ್ರಸಿದ್ಧಿಯಾಗಿದೆ. ಅದರ ಸದ್ದು, ಆವೇಶ ಇವುಗಳನ್ನು ಗಮನಿಸಿ ಅದು ಗಂಡು ಕಲೆ ಎಂದು ಕರೆಯಲ್ಪಟ್ಟಿದ್ದರೂ ಇತ್ತೀಚೆಗೆ ಮಹಿಳೆಯರೂ ಕೂಡಾ ಅದರಲ್ಲಿ ತೊಡಗಿಸಿಕೊಂಡು ಸಾಧಕರಾಗಿದ್ದಾರೆ. ಕಲಾವಿದರು ಒಂದೆಡೆ ನಿಂತು ಡೊಳ್ಳನ್ನು ಬಡಿಯದೇ, ತಮ್ಮದೇ ಬಡಿತದ ತಾಳಕ್ಕೆ, ಲಯಕ್ಕೆ ತಕ್ಕಂತೆ ನಾಟ್ಯ ಮಾಡುತ್ತಾರೆ. ನೋಡುಗರಿಗೆ ಬಹಳ ವಿಶಿಷ್ಟವೂ ಸಾಹಸಮಯವೂ ಎನ್ನುವಂತೆ ಪಿರಮಿಡ್ ಆಕೃತಿಯಲ್ಲಿ ನಿಂತು ನೃತ್ಯ ಪ್ರದರ್ಶನ ನೀಡುತ್ತಾರೆ. ಈ ಪ್ರಕಾರದ ಕಲೆಯನ್ನು ಎಲ್ಲಾ ಸಾಂಸ್ಕೃತಿಕ ಹಬ್ಬದ ಸಂದರ್ಭದಲ್ಲಿ ಪ್ರದರ್ಶಿಸಲಾಗುತ್ತದೆ. ಕನ್ನಡ ಜಾನಪದ ಪರಂಪರೆಯ ದೀರ್ಘ ಇತಿಹಾಸದಲ್ಲಿ ಇದರದ್ದು ಮುಖ್ಯ ಸ್ಥಾನ ಎಂದು ಹೇಳಬಹುದು.

ಡೊಳ್ಳು ಕುಣಿತದಲ್ಲಿ ಪರಂಪರಾಗತವಾದ ಪರಿಣಿತಿಯನ್ನು ಸಾಧಿಸಿರುವವರು ಕುರುಬ ಸಮುದಾಯದವರೊಬ್ಬರೇಯಾದರೂ, ದೀವರು, ನಾಯಕರು ಮತ್ತು ಉಪ್ಪಾರರು ಕೂಡ ಈ ಕಲೆಯಲ್ಲಿ ಪಾಲ್ಗೊಳ್ಳುತ್ತಾರೆ. ಶಿವಮೊಗ್ಗ ಜಿಲ್ಲೆಯ ದೀವರಂತೂ ಡೊಳ್ಳು ಮೇಳವನ್ನು ತಮ್ಮ ಆರಾಧನೆಗಳ ಕಡ್ಡಾಯ ಭಾಗವಾಗಿಸಿಕೊಂಡಿದ್ದಾರೆ. ಉತ್ತರದ ಬಿಜಾಪುರದಿಂದ ಹಿಡಿದು ಬೆಳಗಾವಿ, ಬಳ್ಳಾರಿ, ರಾಯಚೂರು, ಕಲಬುರ್ಗಿ,

ಚಿಕ್ಕಮಗಳೂರು, ಧಾರವಾಡ, ಚಿತ್ರದುರ್ಗ, ಶಿವಮೊಗ್ಗ ಹಾಗೂ ತುಮಕೂರಿನವರೆಗೂ ಡೊಳ್ಳಿನ ಕುಣಿತ ವ್ಯಾಪಕ ಜನಪ್ರಿಯತೆಯನ್ನು ಗಳಿಸಿದೆ.

**ಕಂಸಾಳೆ:**

ಕಂಸಾಳೆ ನೃತ್ಯವು ಮೈಸೂರು, ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಯಲ್ಲಿ ಜನಪ್ರಿಯವಾದ ಜಾನಪದ ನೃತ್ಯ ಪ್ರಕಾರ. ಬೀಸು ಕಂಸಾಳೆ ಮಹದೇಶ್ವರ ಪೂಜೆಯ ಆಚರಣೆಗಳಿಗೆ ನಿಕಟವಾಗಿ ಸಂಬಂಧಿಸಿದ ಮತ್ತೊಂದು ಹುರುಪಿನ ನೃತ್ಯ ಪ್ರಕಾರವಾಗಿದೆ. ಮಹದೇಶ್ವರ ಸ್ವಾಮಿಯ ವೈಭವವನ್ನು ಸ್ತುತಿಸುವ ಹಾಡುಗಳೊಂದಿಗೆ ಮಹದೇಶ್ವರ ಗುಡ್ಡರು ಲಯಬದ್ಧವಾಗಿ ನುಡಿಸುತ್ತಾರೆ. ಪರಂಪರಾಗತವಾಗಿ ಮಹದೇಶ್ವರನಿಗೆ ಗುಡ್ಡರನ್ನಾಗಿ ಬಿಡುವ ಪದ್ಧತಿ ಈ ಜಿಲ್ಲೆಗಳಲ್ಲಿ ನಡೆಯುತ್ತದೆ. ಸೋಮವಾರ, ಶುಕ್ರವಾರದಂದು, ಕಂಸಾಳೆ ಬಡಿಯುತ್ತಾ ಭಿಕ್ಷಾಟನೆ ಮಾಡುತ್ತಾ, ತನ್ನ ಕಾಯಕವನ್ನು ನಡೆಸುವ ಪದ್ಧತಿ ಇವರಲ್ಲಿದೆ. ತಾನೇ ಶ್ರೇಷ್ಠ ಎಂಬ ಭಾವವನ್ನು ಹೋಗಲಾಡಿಸುವ ಸಲುವಾಗಿ, ನಾವೆಲ್ಲರೂ ಬೇಡುವವರು ಎಂಬ ಚಿಂತನೆಯನ್ನು ಬಿತ್ತಲು ಈ ಪ್ರಕ್ರಿಯೆಯನ್ನು ನಡೆಸಿಕೊಂಡು ಬರಲಾಗುತ್ತಿದೆ. ಇಂದಿಗೂ ಇದೊಂದು ಪ್ರದರ್ಶನ ಕಲೆಯಾಗಿ ಹಲವಾರು ವೇದಿಕೆಗಳಲ್ಲಿ ಪ್ರದರ್ಶನಗೊಂಡಿದೆ. ಸಾಹಸಮಯವಾಗಿಯೂ ಈ ನೃತ್ಯವನ್ನು ನಡೆಸುವವರನ್ನು ಗುರುತಿಸಬಹುದು.

**ವೀರಗಾಸೆ:**

ವೀರಭದ್ರನ ಅವತಾರವನ್ನು ಸ್ಮರಿಸುವ ಸಲುವಾಗಿ ಈ ನೃತ್ಯ ಈ ನಾಡಿನಲ್ಲಿ ಪ್ರಾರಂಭವಾಗಿರುವುದನ್ನು ಗುರುತಿಸಬಹುದು. ಶಿವನನ್ನು ಆರಾಧಿಸುವವರ ಸಂಪ್ರದಾಯದ ಧಾರ್ಮಿಕ ವೀರನೃತ್ಯ ಇದಾಗಿದೆ. ನೃತ್ಯದ ನಡುವೆ ಕನಿಷ್ಠ ಎರಡು ಜನ ಕಲಾವಿದರುಗಳು ಸೇರಿ ಒಡಪು ಹೇಳುವ ಕಾರ್ಯಕ್ರಮ ನಡೆಸಿಕೊಟ್ಟರೆ, ಗರಿಷ್ಠ ಮೂವತ್ತು ಮಂದಿ ಇದರಲ್ಲಿ ಭಾಗವಹಿಸುವರು. ಮೈಸೂರು, ಚಾಮರಾಜನಗರ, ಚಿಕ್ಕಮಗಳೂರು, ಶಿವಮೊಗ್ಗ, ಚಿತ್ರದುರ್ಗ, ಧಾರವಾಡ ಮುಂತಾದೆಡೆಯಲ್ಲಿ ಈ ನೃತ್ಯ ಪ್ರಚಲಿತದಲ್ಲಿದೆ. ಶ್ರುತಿ, ಚಮಾಳ (ಸಮ್ಮೇಳ ಸಂಬಾಳ), ಓಲಗ ಅಥವಾ ಮೌರಿ, ಕರಡೆವಾದ್ಯ–ಈ ಪಂಚವಾದ್ಯಗಳು ಇಲ್ಲಿ ಬಳಕೆಯಾಗುತ್ತವೆ. ಕರಡೆ ಈ ಕುಣಿತದಲ್ಲಿ ಅನಿವಾರ್ಯ ವಾದ್ಯ ಎನಿಸಿದೆ. ಸಾಮಾನ್ಯವಾಗಿ ಜಾತ್ರೆ, ದೇವರ ಮೆರವಣಿಗೆ, ಸಾಂಸ್ಕೃತಿಕ ಹಬ್ಬ, ಹುಣ್ಣಿಮೆ, ಮದುವೆ, ಗೃಹ ಪ್ರವೇಶ ಮೊದಲಾದ ಸಂದರ್ಭಗಳಲ್ಲಿ ವೀರಗಾಸೆ ನಡೆಯುತ್ತದೆ. ವೀರಭದ್ರ ದೇವರ ಹಾಗೂ ಹಲವು ದೇವರುಗಳ ಒಡಪುಗಳನ್ನು ಹೇಳುವುದು ಈ ನೃತ್ಯದ ಪ್ರತೀತಿ.

**ಗೊರವರ ಕುಣಿತ:**

ಕರ್ನಾಟಕದ ವಿಶಿಷ್ಟ ಜನಪದ ಕಲೆಗಳಲ್ಲಿ ಗೊರವರ ಕುಣಿತವೂ ಒಂದು. ಗೊರವರು ತಮ್ಮನ್ನು ಮೈಲಾರಲಿಂಗನ ಶಿಷ್ಯರೆಂದೂ, ಮುಡುಕುತೊರೆ ಮಲ್ಲಿಕಾರ್ಜುನ ಸ್ವಾಮಿಯ ಒಕ್ಕಲಿನವರೆಂದು ಗುರುತಿಸಿಕೊಳ್ಳುತ್ತಾರೆ. ಪ್ರತಿ ಗೊರವನು ತನ್ನ ಮೊದಲ

ಮಗನಿಗೆ ಮೈಲಾರಲಿಂಗನ ದೀಕ್ಷೆ ಕೊಡಿಸುವ ಮೂಲಕ ಸತ್ಸಂಪ್ರದಾಯ ಮುಂದುವರೆಸುತ್ತಾನೆ. ಹಾಲುಮಣೆಯ ಸೇವೆ ಇವರ ಸಾಂಪ್ರದಾಯಿಕ ಕುಣಿತ. ಹರಕೆ ಹೊತ್ತವರ ಮನೆಯಂಗಳದಲ್ಲಿ ಐದಾರು ಜನ ನಿಂತು ವಿಶಿಷ್ಟ ರೀತಿಯಲ್ಲಿ ನೃತ್ಯ ಮಾಡಿ, ಸತ್ಸಂಪ್ರದಾಯ ಮೆರೆಯುತ್ತಾರೆ. ತಲೆಯಲ್ಲಿ ಕರಡಿ ಚರ್ಮ ಮತ್ತು ಅದರ ಕೂದಲಿನಿಂದ ತಯಾರಿಸಿದ ವಸ್ತ್ರವನ್ನು ಧರಿಸಿ, ಕೈಯಲ್ಲಿ ಮಧ್ಯಮ ಗಾತ್ರದ ಡಮರನ್ನು ಹಿಡಿದುಕೊಂಡು, ಕೆಂಪು ಬಣ್ಣದ ವಸ್ತ್ರವಿನ್ಯಾಸದೊಂದಿಗೆ ಕವಡೆಯನ್ನು ಅಲ್ಲಲ್ಲಿ ಜೋಡಿಸಿರುತ್ತಿದ್ದರು. ಇದು ಅವರ ವಿಶೇಷ ವೇಷಭೂಷಣ. ಗೊರವರು ಏಕಾಗ್ರತೆಯಿಂದ ವರ್ತುಲಾಕಾರದಲ್ಲಿ ನಿಂತು, ಕೆಲವೊಮ್ಮೆ ನೇರವಾಗಿಯೇ ನಿಂತುಕೊಂಡು ನರ್ತಿಸುತ್ತಾರೆ. ಕುರುಬ ಜನಾಂಗದಲ್ಲಿ ಮಾತ್ರ ಆಚರಣೆಯಲ್ಲಿರುವ ಈ ಕುಣಿತ ಅನ್ಯ ಜನಾಂಗದವರಿಗೂ ವಿಸ್ತರಿಸಲ್ಪಡಬೇಕಾದ ಅಗತ್ಯತೆ ಇದೆ. ಚಿತ್ರದುರ್ಗ, ಬಳ್ಳಾರಿ, ಚಾಮರಾಜನಗರ ಜಿಲ್ಲೆಗಳಲ್ಲಿ ಉಪ್ಪಾರ ಜನಾಂಗದವರು ಆಚರಿಸುತ್ತಾರೆ.

**ಯಕ್ಷಗಾನ:**

ಕರ್ನಾಟಕದ ಕರಾವಳಿ ಭಾಗದ ಜಿಲ್ಲೆಗಳಾದ ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರಿನ ಭಾಗದಲ್ಲಿ ನೃತ್ಯ, ಹಾಡುಗಾರಿಕೆ, ಮಾತುಗಾರಿಕೆ, ವೇಷ-ಭೂಷಣಗಳನ್ನೊಳಗೊಂಡ ಒಂದು ಸ್ವತಂತ್ರವಾದ ಶಾಸ್ತ್ರೀಯ ಕಲೆ. ಈ ನಾಡಿನ ಸಾಂಪ್ರದಾಯಿಕ ಕಲಾ ಪ್ರಕಾರಗಳಲ್ಲಿ ಅತ್ಯಂತ ಪ್ರಮುಖವಾದುದು.

ಕನ್ನಡದ ಪ್ರಾಚೀನ ಕಾವ್ಯಗಳಲ್ಲಿ ಯಕ್ಷಗಾನ ಎಂಬ ಹೆಸರಿನ ಉಲ್ಲೇಖ ಕಂಡುಬರುತ್ತದೆ. ಮುಂದೆ ಅದು ನಾಟಕ ರೂಪದಲ್ಲಿ ಪರಿವರ್ತನೆಗೊಂಡಾಗ ಬಯಲಾಟ, ದಶಾವತಾರ ಆಟ, ದೊಡ್ಡಾಟ, ಪಾರಿಜಾತ ಎಂಬ ಹೆಸರುಗಳಿಂದ 15ನೆಯ ಶತಮಾನದ ಹೊತ್ತಿಗೆ ರೂಢಿಗೆ ಬಂದಂತೆ ಕಾಣುತ್ತದೆ. ಈ ಬಯಲಾಟದ ಇನ್ನೊಂದು ರೂಪ ತಾಳಮದ್ದಲೆ ಅಥವಾ ಯಕ್ಷಗಾನ ಕೂಟ. ಇದು 16ನೆಯ ಶತಮಾನದಲ್ಲಿ ರೂಢಿಯಾಗಿದ್ದಂತೆ ತಿಳಿದುಬರುತ್ತದೆ. ಕರ್ನಾಟಕದ ಸಂಸ್ಕೃತಿಯ ಪ್ರತೀಕವಾಗಿರುವ ಈ ಕಲೆಯು ಇಂದು ಕಲಾವಿದರಿಗೆ ಸರಿಯಾದ ಪೋಷಣೆ ಸಿಗದೆ ಹಿನ್ನೆಲೆಗೆ ಸರಿಯುತ್ತಿರುವುದು ಬೇಸರದ ಸಂಗತಿ.

**ತೊಗಲುಗೊಂಬೆಯಾಟ:**

ಈ ವರ್ಗದ ಜನರನ್ನು ಕಿಳ್ಳೆಕ್ಯಾತ, ಸಿಳ್ಳೆಕ್ಯಾತ ಎಂಬ ಹೆಸರುಗಳಿಂದ ಕರೆಯುವರು. ಕಿಳ್ಳೆಕ್ಯಾತರು, ಗೊಂಬೆರಾಮರು ಹಾಗೂ ಚಿತ್ರಮರಾಟರು ಎಂಬ ಹೆಸರಿನಿಂದ ತೊಗಲುಗೊಂಬೆಯಾಟ ಆಡಿಸುವವರನ್ನು ಗುರುತಿಸಬಹುದು. ಇವರು ರಾಮಾಯಣದಲ್ಲಿ ಗುಹನ ವಂಶಕ್ಕೆ ಸೇರಿದವರೆಂದೂ ಗೊಂಬೆಯಾಟ ಕುಲಕಸುಬಾಗಿ ಇವರಲ್ಲಿ ಉಳಿಯಲು ಶ್ರೀರಾಮನ ಶಾಪವೇ ಕಾರಣವೆಂದು ದಂತ ಕಥೆಯನ್ನು ಹೇಳುವರು. ಕಿಳ್ಳೆಕ್ಯಾತರ ಬಗೆಗಿನ ಕಥೆಯೊಂದು ಈ ರೀತಿ ಇದೆ: ‘‘ಕತ್ತಾರೆ ಕಾಳಾಚಾರಿ

ಎಂಬ ಮರಾಟಿ ವ್ಯಕ್ತಿ ವ್ಯವಸಾಯ ಕುಟುಂಬದ ಒಬ್ಬ ಹೆಂಗಸಿನೊಂದಿಗೆ ಗೌಪ್ಯ ಸಂಬಂಧವಿಟ್ಟುಕೊಂಡಿದ್ದನಂತೆ. ಈ ಗುಪ್ತ ಸಂಬಂಧ ಬಯಲಾದಾಗ ಆ ಹೆಣ್ಣಿನ ಮನೆಯವರು ಅವಳನ್ನು ಮಕ್ಕಳು ಸಮೇತವಾಗಿ ಹೊರಹಾಕಿದರು. ಆಗ ಕಾಳಾಚಾರಿ ತೊಗಲುಗೊಂಬೆಗಳನ್ನು ಮಾಡಿಕೊಟ್ಟು ಅವರ ಜೀವನ ನಡೆಸಲು ಸಹಾಯ ಮಾಡಿದ. ಅವರೇ ಇಂದಿನ ಕಿಳ್ಳೆಕ್ಯಾತ ಜನಾಂಗದವರು". ತೊಗಲುಗೊಂಬೆಯಾಟದ ಹಿಂದೆ ಅನೇಕ ಉದ್ದೇಶಗಳಿವೆ. ಮಳೆ ಬರದೆ ಹೋದಾಗ ಗೊಂಬೆಯಾಟ ಆಡಿಸಿದರೆ ಮಳೆ ಬರುತ್ತದೆ ಎಂಬ ನಂಬಿಕೆ ಜನರಲ್ಲಿದೆ. ತೊಗಲುಗೊಂಬೆಯಾಟ ಆಡಿಸುವುದರಿಂದ ದನಕರುಗಳಿಗೆ ಬರುವ ರೋಗದ ನಿವಾರಣೆಯಾಗುತ್ತದೆ ಎಂಬ ನಂಬಿಕೆಯಿಂದ ಜಾತ್ರೆ, ಉತ್ಸವಗಳಲ್ಲಿ ಕೂಡ ಈ ಆಟವು ನೆರವೇರುತ್ತದೆ.

**ಆಧುನಿಕತೆಯ ಪ್ರಭಾವ:**

ಜಾನಪದ ಪರಂಪರೆಯ ಕಲೆ ಮತ್ತು ಜೀವನಶೈಲಿಯ ಮೇಲೆ ಆಧುನಿಕತೆ ಗಾಢವಾದ ಪ್ರಭಾವವನ್ನು ಬೀರಿದೆ. ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಜನಪದ ಸಂಸ್ಕೃತಿಯನ್ನು ಅನುಸರಿಸುವವರು ಸಾಹಸ ಮಾಡುತ್ತಿದ್ದಾರೆ. ಹೊಸತನವೆಂದ ತಕ್ಷಣ ಎಲ್ಲವೂ ಒಳಿತು, ಹಳೆಯದಾದುದೆಲ್ಲಾ ಕೆಡುಕು ಎಂದು ಭಾವಿಸುವ ಮನಸ್ಥಿತಿಯನ್ನು ಮೊದಲು ಬದಲಾಯಿಸಿಕೊಳ್ಳಬೇಕಿದೆ. ಆಧುನಿಕ ಮಾಧ್ಯಮಗಳಾದ ಸಿನಿಮಾ, ದೂರದರ್ಶನ, ರೇಡಿಯೋ, ಸಾಮಾಜಿಕ ಜಾಲತಾಣ ಈ ಮೊದಲಾದವುಗಳು ಪರಂಪರೆಯ ಕಲೆಯನ್ನು ಮೂಲೆಗುಂಪು ಮಾಡಿರುವ ಸಂಗತಿಯನ್ನು ತಳ್ಳಿಹಾಕುವಂತಿಲ್ಲ. ಇಂದಿನ ಪೀಳಿಗೆ ಜನರಿಗೆ ಪರಂಪರೆಯ ಮೌಲ್ಯವನ್ನು ಸರಿಯಾದ ರೀತಿಯಲ್ಲಿ ಬೋಧಿಸಬೇಕಾದ ಅನಿವಾರ್ಯತೆ ಇಂದು ಸೃಷ್ಟಿಯಾಗಿದೆ. ಆಧುನಿಕತೆಯ ಗಾಢ ಪ್ರಭಾವದಿಂದ ಇಂದಿನ ಯುವಕರು ತಲೆತಲಾಂತರದಿಂದ ಬಂದಿರುವ ಕುಲಕಸುಬುಗಳನ್ನು ಅಪಮಾನವೆಂದು ಮುಂದುವರಿಸುತ್ತಿಲ್ಲ. ಕರಕುಶಲ ಕಲೆಗಳನ್ನು, ವಂಶಪಾರಂಪರ್ಯವಾಗಿ ಬಂದಿರುವ ಜನಪದ ಕಲೆಯನ್ನು ಅನುಸರಿಸದೆ ಬೇರೆ ವೃತ್ತಿಗಳೆಡೆಗೆ ಆಕರ್ಷಿತರಾಗುತ್ತಿದ್ದಾರೆ.

ಆಧುನಿಕತೆ ಎಂಬುದು ಎಲ್ಲಾ ವಲಯಕ್ಕೂ ಅನಿವಾರ್ಯವಾಗಿ ಬೇಕಾಗಿರುವಂತಹ ಪ್ರಕ್ರಿಯೆ. ಆದರೆ ಅದನ್ನು ಕುರಿತಂತೆ ವಿದ್ವಾಂಸರು ತಮ್ಮದೇ ಅಭಿಪ್ರಾಯವನ್ನು ತಿಳಿಸಿದ್ದಾರೆ. "ಆಧುನಿಕತೆ ಜ್ಞಾನವಾಗಿ ಯಾವೊತ್ತು ಬೇಕು, ಆದರೆ ಯಜಮಾನನಾಗಿ ಅಲ್ಲ"[4] ಈ ಮಾತು ವಾಸ್ತವಕ್ಕೆ ಹತ್ತಿರವಾದಂತಿದೆ. ಹಳತನೆಲ್ಲಾ ಮೂಲೆಗುಂಪು ಮಾಡುವಂತಹ ಆಧುನಿಕತೆಯು ಈ ನೆಲದ ಸಂಸ್ಕೃತಿ ಪರಂಪರೆಯನ್ನು ಗೌರವಿಸದೇ, ಕೇವಲ ಭಾವದಿಂದ ಕಾಣುವುದು, ಪರಂಪರೆಯ ದೃಷ್ಟಿಯಲ್ಲಿ ಒಳ್ಳೆಯ ಬೆಳವಣಿಗೆಯಲ್ಲ.

ಆಧುನಿಕತೆಯಿಂದ ಸಾಕಷ್ಟು ಅನುಕೂಲತೆಗಳಾಗಿವೆ. ನಮ್ಮ ಪ್ರಾಚೀನ ಪರಂಪರೆಯ ಶಾಸನ, ಸಾಹಿತ್ಯ ಕೃತಿಗಳು, ಭೂಗರ್ಭದಲ್ಲಿ ಅಡಗಿಹೋಗಿದ್ದ ಎಲ್ಲಾ ರಾಜಕೀಯ ಇತಿಹಾಸವನ್ನು, ವಾಸ್ತುಶಿಲ್ಪ ಕಲೆಯನ್ನು ಕುರಿತಂತೆ ಹೊಸ

ವ್ಯಾಖ್ಯಾನಗಳಾಗಿವೆ. ಅದನ್ನು ಸಂಗ್ರಹಿಸಿ, ಸಂಪಾದಿಸಿಕೊಟ್ಟ ಕೀರ್ತಿಯು ಪಾಶ್ಚಾತ್ಯ ವಿದ್ವಾಂಸರಿಗೆ ಸಲ್ಲಬೇಕಾಗುತ್ತದೆ. ಅದರ ಜೊತೆಗೆ ಭಾರತೀಯ ಪರಂಪರೆಯ ವಿದ್ವಾಂಸರೂ ಕೂಡ ಕಾರ್ಯಗೈದಿದ್ದಾರೆ. ಆ ಮೂಲಕ ತೆರೆಮರೆಯಲ್ಲಿದ್ದ ನಮ್ಮದೇ ಇತಿಹಾಸವನ್ನು ಬೆಳಕಿಗೆ ತಂದುದು ಈ ಆಧುನಿಕತೆಯೇ ಎಂಬುದನ್ನು ಒಪ್ಪಬೇಕಾಗುತ್ತದೆ.

ಶ್ರೇಷ್ಠತೆ ಎಂಬ ಸಂಗತಿ ಬಂದಾಗ, ಆಧುನಿಕತೆಯನ್ನು ಭಾರತೀಯರಿಗೆ ಪರಿಚಯಿಸದ ಪಾಶ್ಚಾತ್ಯರೂ ಅದನ್ನು ಅನುಸರಿಸಿದ ಸ್ಥಳೀಯರು, ಈ ನೆಲದ ಸಂಸ್ಕೃತಿ ಪರಂಪರೆಯನ್ನು ಅಪವ್ಯಾಖ್ಯಾನ ಮಾಡಲು ಪ್ರಾರಂಭಿಸಿದರು. ಅದು ನಮ್ಮ ಪರಂಪರೆಗೆ ಆದಂತಹ ಹಿನ್ನಡೆ ಎನ್ನಬಹುದು. "ಆಧುನಿಕತೆ ಜಾತಿ ಶ್ರೇಷ್ಠತೆಯನ್ನು ಒಡೆಯಿತು ಎಂಬುದು ಅಮೋಘ ಸಾಧನೆ, ಅದಕ್ಕೆ ಎಲ್ಲಾ ಬಡವರ ಧನ್ಯವಾದಗಳು. ಅದು ನಮ್ಮನ್ನೆಲ್ಲ ಅಜ್ಞಾನಿಗಳು ಎಂದು ಘೋಷಿಸಿತಲ್ಲ, ಅದು ನಮ್ಮ ಮರಣ ಶಾಸನ. ನಾವೀಗ, ನಮ್ಮ ಮರಣ ಶಾಸನವನ್ನು ತಲೆಯ ಮೇಲೆ ಹೊತ್ತುಕೊಂಡು ತಿರುಗಾಡುತ್ತಿದ್ದೇವೆ."[5] ಈ ಮಾತುಗಳು ಆಧುನಿಕತೆಯನ್ನು ಅಪ್ಪಿಕೊಂಡದ್ದರಿಂದ ನಮ್ಮದೇ ಪರಂಪರೆಯ ಮೇಲೆ ಆದ ದಾಳಿಯನ್ನು ಪ್ರತಿಬಿಂಬಿಸುತ್ತದೆ.

ಆಧುನಿಕತೆಯ ಪ್ರಭಾವಗಳು ಇದ್ದಾಗಿಯೂ ಪರಂಪರೆಯ ಸಂಸ್ಕೃತಿಯನ್ನು ಉಳಿಸಿ ಬೆಳೆಸಬೇಕೆಂಬ ಧ್ಯೇಯವನ್ನು ಇರಿಸಿಕೊಂಡರೆ, ಖಂಡಿತವಾಗಿಯೂ ಯಾವುದೇ ಅಡೆತಡೆಗಳನ್ನು ಸವಾಲಾಗಿ ಸ್ವೀಕರಿಸಿ ಬೆಳೆದು ನಿಲ್ಲುವುದು ಕಷ್ಟದ ಕೆಲಸವಲ್ಲ ಎಂಬುದು ವಿದ್ವಾಂಸರ ಅಭಿಪ್ರಾಯ. "ಯಾವುದೇ ಕಲೆ, ಸಂಗೀತ, ಸಾಹಿತ್ಯವಾದರೂ ಅದು ಉಳಿದು ಬರಬೇಕಾದರೆ ತನ್ನ ಕಾಲ ದೇಶ ಸಮಾಜದ ಜೊತೆಯಲ್ಲಿ ಸ್ವೀಕರಿಸಿದ ಅಂಶಗಳನ್ನು ಉಳಿಸಿಕೊಳ್ಳುವುದರ ಜೊತೆಗೆ, ಸಮಕಾಲೀನ ಜೀವನ ಸಂಗತಿಗಳನ್ನು, ವಿದ್ಯಮಾನಗಳನ್ನು ಮೈಗೂಡಿಸಿಕೊಂಡಿರಬೇಕಾಗುತ್ತದೆ. ಸಮಕಾಲೀನ ಬದುಕಿನ ಸಂಗತವಾದ ಅಂಶಗಳೇನೂ ಇಲ್ಲದಿದ್ದಲ್ಲಿ ಶ್ರೋತೃ ವರ್ಗಕ್ಕೆ ರುಚಿಸದೆ ಹೋಗಬಹುದು. ಆದ್ದರಿಂದ ಕಲಾವಿದನಾದವನು ಕಥೆಯ ನಡುವೆ ಅಲ್ಲಲ್ಲಿ ಸಮಕಾಲೀನ ಜ್ವಲಂತ ಸಮಸ್ಯೆ, ಪರಿಹಾರಗಳನ್ನು ಸಂದರ್ಭೋಚಿತವಾಗಿ ಅಳವಡಿಸಿಕೊಂಡು ರಂಜನೀಯ ಶೈಲಿಯಲ್ಲಿ ರೂಪಿಸಬೇಕು."[6] ಈ ಮಾತುಗಳು ಪೂರಕವೆನ್ನಿಸುತ್ತದೆ. ಕಲಾವಿದರ ಈ ರೀತಿಯ ಪ್ರಯತ್ನದ ಜೊತೆಗೆ ಕಲಾವಿದರನ್ನು ಪೋಷಿಸುವ ಸರ್ಕಾರದ ಅನುದಾನಗಳು ಮತ್ತು ಅವರಿಗೆ ಒದಗಿಸುವ ಸವಲತ್ತುಗಳು ಹೆಚ್ಚಾಗಬೇಕಾಗುತ್ತದೆ. ಹೊಸತಲೆಮಾರು ಕೂಡಾ ಪರಂಪರೆಯ ಜ್ಞಾನ ಮತ್ತು ಕಲೆ, ನೃತ್ಯ, ಕರಕುಶಲತೆಯ ಬಗ್ಗೆ ಆಸ್ತೆಯನ್ನು ವಹಿಸಿಕೊಂಡರೆ, ನಮ್ಮ ಜಾನಪದ ಪರಂಪರೆಯ ಗಟ್ಟಿಯಾದ ಅಡಿಪಾಯ ಮತ್ತೊಮ್ಮೆ ಸಿಕ್ಕಂತಾಗುತ್ತದೆ.

ಒಟ್ಟಾರೆಯಾಗಿ ಜನಪದ ಪರಂಪರೆ ಮತ್ತು ಆಧುನಿಕ ಪ್ರಭಾವಗಳು ಎಂಬ ಈ ಲೇಖನದಲ್ಲಿ ಜಾನಪದ ಪರಂಪರೆಯ ನೃತ್ಯ ಮತ್ತು ಅಭಿನಯ ಕಲೆಗಳನ್ನು ಪ್ರಧಾನವಾಗಿ ಪರಿಗಣಿಸಿ ವಿವೇಚಿಸಲಾಗಿದೆ. ಯಾವುದೇ ಹೊಸದರ ಆಗಮನ

ಹಳೆಯದನ್ನು ಹಿನ್ನೆಲೆಗೆ ಸರಿಸುವಂತಾಗದೆ, ಅದಕ್ಕೆ ಪೂರಕವಾದ ವಾತಾವರಣವನ್ನು ಸೃಜಿಸಿದರೆ, 'ಹಳೆ ಬೇರು ಹೊಸ ಚಿಗುರು' ಎಂಬಂತೆ, ನಾವೀನ್ಯ ಅಂಶಗಳಿಗೆ ಮತ್ತಷ್ಟು ಮೆರುಗು ಸಿಗಲು ಸಾಧ್ಯವಾಗುತ್ತದೆ. ಭಾರತೀಯ ಅದರಲ್ಲಿಯೂ ಕನ್ನಡ ಜಾನಪದ ಪರಂಪರೆಯು ಬಹಳ ಉತ್ಕೃಷ್ಟ ಮತ್ತು ಶ್ರೀಮಂತಿಕೆಯಿಂದ ಕೂಡಿದ್ದು, ಆ ಪರಂಪರೆಯನ್ನು ಉಳಿಸುವಂತಹ ನಿಟ್ಟಿನಲ್ಲಿ, ಸರ್ಕಾರ ಮತ್ತು ಶಿಕ್ಷಣ ಸಂಸ್ಥೆಗಳು, ಸಾರ್ವಜನಿಕರು ಹಿತಾಸಕ್ತಿಯನ್ನು ತೋರಿಸಿದರೆ, ಪ್ರಪಂಚದ ವಿಭಿನ್ನ ಪರಂಪರೆಯ ನಾಡು ಕನ್ನಡ ಎಂಬ ಹೆಸರು ಬರುವ ಸಂಗತಿ ದೂರವಿಲ್ಲ ಎಂದು ಅಭಿಪ್ರಾಯಿಸಬಹುದು.

**ಕೊನೆ ಟಿಪ್ಪಣಿಗಳು:**

1. ನರಸಿಂಗರಾವ್ ಮಾನ್ವಿ, ಎಫ್.ಜಿ. ಮಠದ್ ಮತ್ತು ಸಿದ್ದಯ್ಯ ಪುರಾಣಿಕ್ (ಸಂ), (1956), ಪದ್ಯರತ್ನಾಕರ, ಹೈದರಾಬಾದು: ಹೈದರಾಬಾದು ಕನ್ನಡ ಸಾಹಿತ್ಯ ಪರಿಷತ್ತು, ಪು.ಸಂ. 20
2. ಹಲಸಂಗಿ ಚೆನ್ನಮಲ್ಲಪ್ಪ, ಲಿಂಗಪ್ಪ, ರೇವಪ್ಪ ಮತ್ತು ಗೆಳೆಯರು (ಸಂ), (1990), ಗರತಿಯ ಹಾಡು, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಪು.ಸಂ. 34
3. ಚೇತನ ಎಚ್.ಆರ್., ದಕ್ಷಿಣ ಕರ್ನಾಟಕ ನೃತ್ಯಗಳು, ಗದಗ: ವಿದ್ಯಾನಿಧಿ ಪ್ರಕಾಶನ, ಪು.ಸಂ. 292
4. ರಾಮಚಂದ್ರೇಗೌಡ ಹಿ.ಶಿ. ಮತ್ತು ಚಕ್ಕೆರೆ ಶಿವಶಂಕರ್ (ಸಂ), (2003), ಜಾನಪದ ತಲೆಮಾರು–1 (ಒಂದೆ ಚಿತ್ತದಿಂ ನೆನೆದು), ಬೆಂಗಳೂರು: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಪು.ಸಂ. 1
5. ಅದೇ, ಪು.ಸಂ. 3.
6. ಅಂಬಳಿಕೆ ಹಿರಿಯಣ್ಣ, (1984), ಜಾನಪದ: ಕೆಲವು ವಿಚಾರಗಳು, ಮೈಸೂರು: ಪ್ರಜ್ವಲ ಪ್ರಕಾಶನ, ಪು.ಸಂ. 34

**ಪರಾಮರ್ಶನ ಗ್ರಂಥಗಳು:**


1. ಅಂಬಳಿಕೆ ಹಿರಿಯಣ್ಣ, (1984), ಜಾನಪದ: ಕೆಲವು ವಿಚಾರಗಳು, ಮೈಸೂರು: ಪ್ರಜ್ವಲ ಪ್ರಕಾಶನ.
2. ಚೇತನ ಎಚ್.ಆರ್., ದಕ್ಷಿಣ ಕರ್ನಾಟಕ ನೃತ್ಯಗಳು, ಗದಗ: ವಿದ್ಯಾನಿಧಿ ಪ್ರಕಾಶನ.
3. ನರಸಿಂಗರಾವ್ ಮಾನ್ವಿ, ಎಫ್.ಜಿ. ಮಠದ್ ಮತ್ತು ಸಿದ್ದಯ್ಯ ಪುರಾಣಿಕ್ (ಸಂ), (1956), ಪದ್ಯರತ್ನಾಕರ, ಹೈದರಾಬಾದು: ಹೈದರಾಬಾದು ಕನ್ನಡ ಸಾಹಿತ್ಯ ಪರಿಷತ್ತು.
4. ರಾಮಚಂದ್ರೇಗೌಡ ಹಿ.ಶಿ. ಮತ್ತು ಚಕ್ಕೆರೆ ಶಿವಶಂಕರ್ (ಸಂ), (2003), ಜಾನಪದ ತಲೆಮಾರು–1 (ಒಂದೆ ಚಿತ್ತದಿಂ ನೆನೆದು), ಬೆಂಗಳೂರು: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ.
5. ಹಲಸಂಗಿ ಚೆನ್ನಮಲ್ಲಪ್ಪ, ಲಿಂಗಪ್ಪ, ರೇವಪ್ಪ ಮತ್ತು ಗೆಳೆಯರು (ಸಂ), (1990), ಗರತಿಯ ಹಾಡು, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.